
ಮುಂದೆ ಮರದೊಂದಿಗೆ ಬಂದ ಚಿರುನನ್ನು ನೋಡಿ ಅಜ್ಜನಿಗೆ ತುಂಬಾ ಆಶ್ಚರ್ಯವಾಯಿತು. ಚಿರು ಅಜ್ಜನಿಗೆ ನಡೆದ ಕಥೆಯನ್ನೆಲ್ಲಾ ಹೇಳಿ 'ಅಜ್ಜಾ, ಈ ನನ್ನ ಮರಕ್ಕೆ ನಿನ್ನ ತೋಟದಲ್ಲಿ ಜಾಗ ಕೊಡುವೆಯಾ?' ಎಂದು ಬೇಡಿಕೊಂಡ. ಅಜ್ಜ ಸಂತೋಷದಿಂದ ಒಪ್ಪಿಕೊಂಡರು. ಚಿರುನ ಪ್ರೀತಿಯ ಆಲದ ಮರ ಅಜ್ಜನ ತೋಟದಲ್ಲಿ ಇತರ ಮರಗಳೊಂದಿಗೆ ಸೇರಿ ಸಂತೋಷದಿಂದ ನಿಂತುಕೊಂಡಿತು.

ಇತ್ತ ಬೆಳಗಾದ ಮೇಲೆ ಮನೆಯಲ್ಲಿ ಚಿರುನನ್ನು ಕಾಣದೇ ಅಪ್ಪ ಅಮ್ಮ ಗಾಬರಿಯಾಗಿ ಹುಡುಕತೊಡಗಿದರು. ಅಷ್ಟರಲ್ಲಿ ಅಜ್ಜ ಫೋನ್ ಮಾಡಿ ಚಿರು ಮರದೊಂದಿಗೆ ತಮ್ಮ ಮನೆಗೆ ಬಂದ ಕಥೆಯನ್ನು ಹೇಳಿದರು. ಅಷ್ಟು ಹೊತ್ತಿಗೆ ಮರ ಕಡಿಯಲು ಕೆಲಸಗಾರರು ಬಂದಾಗ ಅಲ್ಲಿ ಮರ ಇರದೇ ದೊಡ್ಡದಾದ ಗುಂಡಿ ಮಾತ್ರ ಇದ್ದುದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು! ಆಗ ಚಿರುನ ಅಪ್ಪ ಅಮ್ಮ, ಚಿರು ಮತ್ತು ಮರದ ಕಥೆಯನ್ನು ಎಲ್ಲರಿಗೂ ಹೇಳಿದರು. ಆಗ ದೊಡ್ಡವರೆಲ್ಲರಿಗೂ ತಾವು ಮರ ಕಡಿಯಲು ನಿರ್ಧರಿಸಿದುದು ತಪ್ಪೆಂದು ತೋರಿತು. ಅವರೆಲ್ಲರೂ ಸೇರಿ ಅಲ್ಲಿ ಕ್ಲಬ್ ಹೌಸ್ ಕಟ್ಟುವುದು ಬೇಡ, ಅದರ ಬದಲಿಗೆ ಅಲ್ಲಿ ಇನ್ನೊಂದು ಮರವನ್ನೇ ಬೆಳೆಸೋಣ ಎಂದು ತೀರ್ಮಾನಿಸಿ, ಆ ಜಾಗದಲ್ಲಿ ಬೇರೊಂದು ಆಲದ ಗಿಡವನ್ನು ತಂದು ನೆಟ್ಟರು.

ಅದನ್ನು ಕಂಡು ಮಕ್ಕಳಿಗೆಲ್ಲಾ ತುಂಬಾ ಖುಷಿಯಾಯಿತು. ಅಷ್ಟರಲ್ಲಿ ಅಜ್ಜನ ಜೊತೆ ಮನೆಗೆ ಬಂದ ಚಿರುಗೂ ಅಲ್ಲಿ ಇನ್ನೊಂದು ಗಿಡವನ್ನು ನೋಡಿ ಖುಷಿ ಆಯಿತು. ಮಕ್ಕಳೆಲ್ಲ ಸೇರಿ ಪ್ರೀತಿಯಿಂದ ಆ ಗಿಡವನ್ನು ಆರೈಕೆ ಮಾಡತೊಡಗಿದರು. ಆ ಮಕ್ಕಳ ಜೊತೆಜೊತೆಗೇ ಆ ಮರವೂ ವೇಗವಾಗಿ ಬೆಳೆಯತೊಡಗಿತು. ಸ್ಕೂಲಿಗೆ ರಜಾ ಬಂದಾಗಲೆಲ್ಲಾ ಚಿರು ಅಜ್ಜನ ಮನೆಗೆ ಓಡಿ ಬರುತ್ತಿದ್ದ. ಅಲ್ಲಿ ತನ್ನ ಪ್ರೀತಿಯ ಗೆಳೆಯ ಆಲದ ಮರದೊಂದಿಗೆ ಆಡುತ್ತಾ ಸಮಯ ಕಳೆಯುತ್ತಿದ್ದ. ಆಲದ ಮರವೂ ತನ್ನನ್ನು ಉಳಿಸಿದ ಪುಟ್ಟ ಗೆಳೆಯ ಚಿರುನನ್ನು ಸಂಭ್ರಮದಿಂದ ಸ್ವಾಗತಿಸುತ್ತಿತ್ತು. ■



# ಮಳೆಯಲಿ ಆಟವ ಆಡಿದರು

■ **ಕರವೀರಪ್ರಭು ಕ್ಯಾಲಕೊಂಡ**
ಕಲೆ: ಸಂತೋಷ್ ಸಸಿಹಿತ್ಲು



ರಪ ರಪ ರಪ ರಪ ಮಳೆಯದು ಸುರಿಯಲು
ಮಕ್ಕಳು ಬಂದರು ಅಂಗಳಕೆ
ತಕ ತಕ ತಕ ತಕ ಕುಣಿದರು ಹಾಡುತ
ಮಳೆಯ ಆಟವ ನೋಡೋಕೆ

ಪರ ಪರ ಪರ ಪರ ಹಾಳೆಯ ಹರಿದು
ಹಡಗನು ಮಾಡಿತು ಆಡೋಕೆ
ಜುಳು ಜುಳು ಜುಳು ಜುಳು ಹರಿಯುವ ನೀರಲಿ
ತೇಲಿ ಬಿಟ್ಟರು ನೋಡೋಕೆ

ಸರ ಸರ ಸರ ಸರ ಸಾಗಲು ಮುಂದಕೆ
ಖುಷಿಯಲಿ ಹಾಕಿತು ಕೇಕೆ
ತಪ ತಪ ತಪ ತಪ ಮೈಯದು ತೊಯ್ಯಲು
ಆಟವು ನಿಂತಿತು ಅಷ್ಟಕ್ಕೆ

ಸಟ ಸಟ ಸಟ ಸಟ ಸೀನದು ಸುರಿಯಲು
ಅಪ್ಪಿತು ನೆಗಡಿ ಕಾಡೋಕೆ
ಗಟ ಗಟ ಗಟ ಗಟ ಕಷಾಯ ಕುಡಿಯಲು
ನೆಗಡಿಯು ಮಾಯವಾಗೋಕೆ



## ಕುಂಚ ಪ್ರಪಂಚ

**ಪ್ರತ್ಯುಷ್ ಶುಭಾಂಗ್**
4ನೇ ತರಗತಿ, ಹೈಗೇಟ್ ಪ್ರೈಮರಿ ಸ್ಕೂಲ್, ಪರ್ಥ್ ವೆಸ್ಟರ್ನ್, ಆಸ್ಟ್ರೇಲಿಯಾ







ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in



**ಧನ್ಯತಾ ಎಲ್**
8ನೇ ತರಗತಿ, ಟೆರೇಷಿಯನ್ ಪ್ರೌಢಶಾಲೆ, ಮೈಸೂರು